ಕೊಟ್ಟಿದ್ದೇವೆ. ಹಣದ ಕೊರತೆ ಇಲ್ಲ ಎಷ್ಟು ಬೇಕಾದರೂ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆಂದು ನಾನು ಸ್ಪಷ್ಟವಾಗಿ ತಿಳಿಸಿದ್ದೇನೆ. ಅದರ ಪ್ರಕಾರ ಜಿಲ್ಲಾಧಿಕಾರಿಗಳು ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು : ಶ್ರೀ ಹೆಚ್.ಎಸ್. ಪಾಟೀಲ್.....

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು : ತಾವು ಡಿ.ಸಿ.ಯವರನ್ನು ಕಾಂಟ್ಯಾಕ್ಟ್‌ಮಾಡಿ. ಅವರು ಎಷ್ಟು ಹಣ ಬೇಕಾದರೂ ಒದಗಿಸುತ್ತಾರೆ.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ ಹಣ ಒದಗಿಸಿರುವಲ್ಲಿ ಈಗ ಎರಡು ಬಾವಿಗಳು ಆಗಿವೆ. ಈಗ 20 ಲಕ್ಷ ಒದಗಿಸಿದ್ದಾರೆ. 8 ಕ್ಷೇತ್ರಗಳು ಇವೆ. ನಮಗೆ 70 ಬಾವಿಗಳು ಆಗಬೇಕು ನನ್ನ ಒಂದೊಂದ ಕ್ಷೇತ್ರಕ್ಕೆ 12 ಬಾವಿಗಳು ಬೇಕು. ಮಂತ್ರಿಗಳು ಹೇಳಿದಂತೆ .....

ಅಧ್ಯಕ್ಷರು : ನಿಮಗೆ 70 ಬೇಕು ಈಗ 13ಕ್ಕೆ ಕೊಟ್ಟಿದ್ದಾರೆ. ಇನ್ನೂ 12 ಕೊಡುತ್ತಾರೆ. ಬಾಕಿ ಬಗ್ಗೆ ಹೇಳಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸಭಾಧ್ಯಕ್ಷರೇ ನಾನು ಹೇಳಿದ್ದೇನೆ. ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ತೆಗೆದುಕೊಳ್ಳಿ ಎಂದು. 70ಕ್ಕೂ ಹಣ ಒದಗಿಸೋಣ. ಆದರೆ ನಾನು ಅವರ ಸಮ್ಮುಖದಲ್ಲಿ ಸುಮಾರು 3 ಗಂಟೆಗಳ ಕಾಲ ಕೂತು ಚರ್ಚೆ ಮಾಡಿದ್ದೇನೆ. ತಮಗೆ ಎಲ್ಲೆಲ್ಲಿ ಬೇಕು ಎಂದು ಬರೆದುಕೊಡಿ ಎಂದು ಕೇಳಿದ್ದಕ್ಕೆ ಒಂದು 70 ಬರೆದುಕೊಟ್ಟಿದ್ದಾರೆ. ನೀಡ್ ಇದ್ದರೆ ಆ 70ನ್ನು ತೆಗೆದುಕೊಳ್ಳೋಣ. ನಾವು ಮೊದಲು ಇನ್‌ಸ್ಟ್ರಕ್ಷನ್ ಕೊಟ್ಟಿದ್ದು ಎಲ್ಲಿ ಅತ್ಯಂತ ಅವಶ್ಯಕತೆ ಇದೆ ಅಲ್ಲಿ ಇದನ್ನು ತೆಗೆದುಕೊಳ್ಳಬೇಕೆಂದು ಅದೂ ಜರೂರಾಗಿ ಇಂತಹ ಕಡೆ ಎಂದು ಹೇಳಿ ಅಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೆವು ಆಗ ಅವರು ಒಂದು ಪಟ್ಟಿ ಮಾಡಿ ಕೊಟ್ಟರು ಅದರಲ್ಲಿ ಒಂದು 20-25 ಹಳ್ಳಿಗಳು ಬರುತ್ತವೆ. ಅದರಂತೆ ಈಗಾಗಲೇ 15 ಪ್ರಾರಂಭ ಮಾಡಿದ್ದಾರೆ ಉಳಿದ 15ಕ್ಕೆ ಫಂಡ್ ರಿಲೀಜ್ ಆಗಿದೆ ಮೂರು ದಿವಸಗಳ ಹಿಂದೆ ಪ್ರಾವಿಜನ್ ಮಾಡಿದ್ದೇವೆ. ಬಹುಶಃ ಅಲ್ಲಿಗೆ ಹಣ ಹೋಗಿರಬಹುದು. ತಾವು ಇಲ್ಲಿ ಇದ್ದೀರಿ ಅಲ್ಲಿ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು : ಮಾನ್ಯ ಹೆಚ್.ಎಸ್. ಪಾಟೀಲರೇ ನಿಮ್ಮ ಪ್ರಶ್ನೆಯನ್ನು ಆರ್.ಡಿ.ಪಿ.ಆರ್.ಗೆ ವರ್ಗಾವಣೆ ಮಾಡಿದ್ದೇನೆ.

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನಲ್ಲಿ ತೆಂಗಿನ ಬೆಳೆ ನಾಶಪಡಿಸುವ ಕಪ್ಪು ತಲೆ ಹುಳುವಿನ ರೋಗ ನಿಯಂತ್ರಿಸಲು ಕ್ರಮ

1411 ಶ್ರೀ ಎ.ವಿ. ವಿಜಯಕುಮಾರ್ (ಹೊಸದುರ್ಗ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ರಾಜ್ಯದಲ್ಲಿರುವ ತೆಂಗಿನ ಬೆಳೆಗೆ ಯಾವುದಾದರೂ ರೋಗ ತಗುಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಬ) ಹಾಗಿದ್ದರೆ, ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನಲ್ಲಿ ಅಪಾರವಾಗಿರುವ ತೆಂಗಿನ ಬೆಳೆ ಸಂಪತ್ತನ್ನು ನಾಶಪಡಿಸುತ್ತಿರುವ ಕಪ್ಪು ತಲೆ ಹುಳುವಿನ ರೋಗ ನಿಯಂತ್ರಿಸಲು ಸರ್ಕಾರವು ಏನು ಕ್ರಮ ಜರುಗಿಸಿದೆ?

(ಇ) ಹಾಗಿದ್ದಲ್ಲಿ, ಸದರಿ ತಾಲ್ಲೂಕಿನಲ್ಲಿ ಪದೇ ಪದೇ ರೈತರಿಗೆ ಸಮಸ್ಯೆಯಾದ ಈ ರೋಗ ತಡೆಗೆ ಶಾಶ್ವತ ಪರಿಹಾರ ನೀಡಲು ಸಾಧ್ಯವೇ?

ಶ್ರೀ ಜೆ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ಇಲ್ಲ. ಆದರೆ ಕೀಟದ ಹಾವಳಿ ಕಂಡುಬಂದಿದೆ.

ಆ) ಕಪ್ಪು ತಲೆ ಕಂಬಳಿ ಹುಳುವಿನ ಹತೋಟಿಗಾಗಿ ಸರ್ಕಾರವು ಹೊಸದುರ್ಗದಲ್ಲಿ 0.75 ಲಕ್ಷ ಪರೋಪಜೀವಿಗಳನ್ನು ಉತ್ಪಾದನೆ ಮಾಡುವ ಮಿನಿ ಪ್ರಯೋಗಾಲಯವನ್ನು ಸ್ಥಾಪಿಸಿದೆ. ಈವರೆಗೆ 41,470 ಪರೋಪಜೀವಿಗಳನ್ನು ಉಚಿತವಾಗಿ ಬಾಧೆಗೊಳಗಾದ ಜಮೀನಿನಲ್ಲಿ ಬಿಡಲಾಗಿದೆ.

ಬೇರು ಮತ್ತು ಕಂಡಕ್ಕೆ ಚುಚ್ಚುಮದ್ದನ್ನು ನೀಡುವ ಸಸ್ಯ ಸಂರಕ್ಷಣಾ ರಾಸಾಯನಿಕಗಳನ್ನು ಸಣ್ಣ ಮತ್ತು ಅತಿಸಣ್ಣ ರೈತರಿಗೆ ಶೇಕಡ 100ರಷ್ಟು ಸಹಾಯಧನದೊಂದಿಗೆ ಹಾಗೂ ಇತರರಿಗೆ ಶೇಕಡ 50ರಷ್ಟು ಸಹಾಯದನದೊಂದಿಗೆ ನೀಡಲಾಗುತ್ತಿದೆ.

ದೊಡ್ಡ ಪ್ರಮಾಣದ ಪ್ರಯೋಗಾಲಯವು ಹೊಸ ದುರ್ಗದಲ್ಲಿ ನಿರ್ಮಾಣ ಹಂತದಲ್ಲಿದೆ.

ಇ) ಈ ಕೀಟದ ಭಾದೆಯನ್ನು ಹತೋಟಿಗೊಳಿಸಲು ಸರ್ಕಾರವು ಒಂದು ಸಮಗ್ರ ವಿಶೇಷ ಯೋಜನೆಯೊಂದನ್ನು ಸಿದ್ಧಪಡಿಸಿದೆ. ಅದರಲ್ಲಿ ಈ ಕೆಳಗಿನ ಅಂಶಗಳು ಸೇರಿವೆ.

1. ಮೊದಲನೇ ಹಂತವಾಗಿ ತೀವ್ರ ಹಾನಿಗೊಳಗಾದ ಗ್ರಾಮಗಳನ್ನು ಗುರುತಿಸಿ ಕರ್ನಾಟಕ ಕೃಷಿ ರೋಗ ಮತ್ತು ಕೀಟಗಳ ಕಾಯ್ದೆ 1968ರ ಪ್ರಕಾರ ನಿಯಂತ್ರಿಸಲು ಕ್ರಮ ತೆಗೆದುಕೊಳ್ಳುವುದು.

2. ಈಗ ಇರುವ ಇಲಾಖಾ ಪ್ರಯೋಗಾಲಯಗಳ ಸಾಮರ್ಥ್ಯವನ್ನು ದ್ವಿಗುಣಗೊಳಿಸುವುದು.

3.ಗ್ರಾಮೀಣ ನಿರುದ್ಯೋಗಿ ಯುವಕರ ಸೇವೆಯನ್ನು ಬಳಸಿಕೊಂಡು ಹಾನಿಗೊಳಗಾದ ಗ್ರಾಮಗಳಲ್ಲಿ ಕಿರು ಪ್ರಯೋಗಾಲಯಗಳನ್ನು ಸ್ಥಾಪಿಸುವುದು.

4. ಪ್ರಯೋಗಾಲಯಗಳಲ್ಲಿ ಉತ್ಪಾಧಿಸಿದ ಪರೋಪ ಜೀವಿಗಳನ್ನು ಇಲಾಖೆಯು ಬಾಧೆಗೊಳಗಾದ ತೋಟಗಳಲ್ಲಿ ಉಚಿತವಾಗಿ ಬಿಡುವುದು.

ಶ್ರೀ ಎ.ವಿ. ವಿಜಯಕುಮಾರ್ : ಮಾನ್ಯ ಅಧ್ಯಕ್ಷರೇ,ಹೊಸದುರ್ಗ ತಾಲ್ಲೂಕಿನಲ್ಲಿ ತೆಂಗಿನ ತೋಟಗಳಿಗೆ ಬಿದ್ದಿರತಕ್ಕಂಥ ಕೀಟ ಬಾಧೆ ಸುಮಾರು 2-3 ವರ್ಷಗಳಿಂದ ಹೆಚ್ಚು ಹೆಚ್ಚು ಆಗುತ್ತಿದೆ. ಪಕ್ಕದ ತಾಲ್ಲೂಕುಗಳಾದ ತಿಪಟೂರು ಮತ್ತು ಚಿಕ್ಕನಾಯಕನ ಹಳ್ಳಿಗಳಿಗೂ ಈ ಕೀಟ ಬಾಧೆ ತಗಲಿ ಅನೇಕ ರೈತರು ಕಂಗಾಲಾಗಿದ್ದಾರೆ ಆದ್ದರಿಂದ ಸರ್ಕಾರದವರು ತೆಗೆದುಕೊಂಡ ಕ್ರಮ ಏನೂ ಉಪಯುಕ್ತ ಇಲ್ಲದೆ ರೋಗ ಹತೋಟಿಗೆ ಬಾರದೆ ಈ ಸಮಸ್ಯೆ ಆಗಿದೆ. ಆದ್ದರಿಂದ ಈ ಬಗ್ಗೆ ಮುಂದೆ ಇನ್ನೂ ಹೆಚ್ಚಿನ ಕ್ರಮ ತೆಗೆದುಕೊಳ್ಳತ್ತಾರೋ ಏನೋ ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಮಾನ್ಯ ಅಧ್ಯಕ್ಷರೇ, ಈ ಭಾಗದಲ್ಲಿ ಸುಮಾರು ಮೂರು ಸಾವಿರ ಚಿಲ್ಲರೆ ಮರಗಳಿಗೆ ಕೀಟಬಾಧೆ ಅಟ್ಯಾಕ್ ಆಗಿ ರೋಗ ಇದೆ ಎಂದು ಗುರುತು ಮಾಡಿದ್ದಾರೆ. ಇದನ್ನು ನಿಯಂತ್ರಣ ಮಾಡತಕ್ಕಂಥಾದ್ದಕ್ಕೆ ಇಲಾಖಾ ವತಿಯಿಂದ ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡು ಸಮರಸಿದ್ಧತೆಯಲ್ಲಿ ಕೆಲಸ ಮಾಡುತ್ತಿದ್ದಾರೆ, ಇದಕ್ಕೆ ತಗಲುವ ಪೂರಾ ಹಣ ಇಲಾಖೆಯವರೇ ಭರಿಸಿ ಕಾರ್ಯಕ್ರಮ ಕೈಗೊಂಡಿದ್ದಾರೆ. ಈಗ ಕಾರ್ಯಕ್ರಣ ಪ್ರಾರಂಭವಾಗಿದೆ. ಈ ಕೆಲಸ ಸಕಾಲದಲ್ಲಿ ಹತೋಟಿಗೆ ತರತಕ್ಕಂಥ ಪ್ರಯತ್ನಮಾಡುತ್ತದೆ.

ಶ್ರೀ ಎ.ವಿ. ವಿಜಯಕುಮಾರ್ : ಸನ್ಮಾನ್ಯ ಅಧ್ಯಕ್ಷರೇ, ಇವರು ಬಿಡತಕ್ಕಂಥ ಪ್ಯಾರಾಸೈಟುಗಳು ಮತ್ತು ಔಷದಿಗಳಿಂದ ರೋಗ ಗುಣವಾಗಿಲ್ಲ. ಮೊಟ್ಟೆ ಮೇಲೆ ಆಕ್ರಮಣ ಮಾಡುವಂಥ ಪ್ಯಾರಾಸೈಟ್‌ಗಳನ್ನು ಹೊರದೇಶಗಳಿಂದ ತರಿಸಿಬಿಡುವಂಥ

ಕಾರ್ಯಕ್ರಮ ಇದೆ. ಅದರ ಬಗ್ಗೆ ಏನಾಗಿದೆ ಎಂಬುದನ್ನು ತಿಳಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಈ ಪ್ಯಾರಾಸೈಟ್‌ಗಳನ್ನು ಪ್ರಯೋಗಾಲಯಗಳಲ್ಲಿ ಹೊಸದಾಗಿ ತೆಗೆಯುತ್ತಿದ್ದೇವೆ. ಹೊರಗಡೆಯಿಂದಲೂ ಇಂಪೋರ್ಟ್ ಮಾಡಿಕೊಳ್ಳುವ ವ್ಯವಸ್ಥೆ ಮಾಡುತ್ತಿದ್ದೇವೆ. ಆ ದಿಸಿಯಲ್ಲಿ ನಾನು ಮೊದಲೇ ನಿಮಗೆ ತಿಳಿಸಿದ್ದೇನೆ. ನಮ್ಮ ಇಲಾಖೆಯಲ್ಲಿರತಕ್ಕಂಥ ಹಣವನ್ನು ಕ್ರೋಢೀಕರಿಸಿ 31ನೇ ತಾರೀಖಿನೊಳಗೆ 3 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು ಮತ್ತು ಈ ದಿಸಿಯಲ್ಲಿ ಸಮಾರೋಪಾದಿಯಲ್ಲಿ ಕೆಲಸ ಆಗಬೇಕೆಂದು ನಾನು ನಿರ್ದೇಶನ ಕೊಟ್ಟಿದ್ದೇನೆ. ಆ ನಿಟ್ಟಿನಲ್ಲಿ ಎಲ್ಲಾ ಕಡೆ ಕೆಲಸ ಆರಂಭ ಮಾಡಿದ್ದಾರೆ. ಬಹುಶಃ ಯಾವುದಾದರು ಭಾಗದಲ್ಲಿ ಬಿಟ್ಟು ಹೋಗಿದ್ದರೆ ಅಥವಾ ನಮ್ಮ ಇಲಾಖೆಯಲ್ಲಿ ಕೆಲಸದ ಅಸಡ್ಡೆ ಮತ್ತು ಅಲಕ್ಷವಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಅದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಅಧ್ಯಕ್ಷರೇ, ಈ ರೋಗವು ಸಾಂಕ್ರಾಮಿಕ ರೋಗ ಹರಿದ ಹಾಗೆ ಹರಡುತ್ತಿದೆ. ಸಾಂಕ್ರಾಮಿಕ ರೋಗ ಹರಡಿದಾಗ ಮನುಷ್ಯರಿಗೆ ಯಾವ ರೀತಿ ಸಾಮೂಹಿಕವಾಗಿ ಇಂಜಕ್ಷನ್, ಮತ್ತೊಂದು ಕೊಡುತ್ತೀರೋ ಅದೇ ರೀತಿ ತೆಂಗಿನ ಬೆಳೆಯನ್ನು ಉಳಿಸುವುದಕೋಸ್ಕರ ಎಲ್ಲೆಲ್ಲಿ ರೋಗ ಹರಡಿದೆಯೋ ಅಲ್ಲೆಲ್ಲಾ ಸಾಮೂಹಿಕವಾಗಿ ಪ್ರತಿಯೊಂದು ಗಿಡಕ್ಕೂ ಔಷಧಗಳನ್ನು ಸಿಂಪಡಿಸುವುದಾಗಲಿ, ಇಂಜಕ್ಷನ್ ಕೊಡುವುದಾಗಲಿ ಮಾಡಿ ರೈತರಿಗೆ ಬಂದಿರತಕ್ಕ ಕಷ್ಟವನ್ನು ಹೋಗಲಾಡಿಸುವುದಕ್ಕೆ ಸರ್ವ ಪ್ರಯತ್ನವನ್ನು ತಾವು ಮಾಡುತ್ತೀರಾ? ಈಗ ಮಾಡುತ್ತಿರುವುದು ಕಣ್ಣೊರೆಸತಕ್ಕಂಥ ಕೆಲಸ. ಇದು ನಮಗೆ ತೃಪ್ತಿಕರವಾಗಿಲ್ಲ. ಇವತ್ತು ತೆಂಗಿನ ಬೆಳೆಗಾರರ ಜೀವನದ ಮಟ್ಟ ಕೆಳಗೆ ಹೋಗುತ್ತಿದೆ. ಬೇಸಿಗೆಯಲ್ಲಿ ರೋಗ ಇನ್ನು ಹೆಚ್ಚು ಹರಡದಂತೆ ಯುದ್ಧೋಪಾದಿಯಲ್ಲಿ ಕಾರ್ಯಕ್ರಮ ತೆಗೆದುಕೊಂಡು ತೆಂಗಿನ ಮರಗಳನ್ನು ಉಳಿಸುತ್ತೀರಾ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಈ ಒಂದು ಕಾರ್ಯಕ್ರಮದ ಬಗ್ಗೆ ಮೇಲಿಂದ ಮೇಲೆ ಈ ಶಾಸನ ಸಭೆಯಲ್ಲಿ ನಾನು ಹೇಳಿದ್ದೇನೆ. ಸಮರ ಸಿದ್ಧತೆಯಲ್ಲಿ ಇಲಾಖಾವತಿಯಿಂದ ಸಾಮೂಹಿಕವಾಗಿ ಎಲ್ಲಾ ಕೆಲಸವನ್ನು ಈಗಾಗಲೇ ಪ್ರಯತ್ನ ಮಾಡುತ್ತಿದ್ದೇವೆ. ಅದರಲ್ಲೂ ತಿಪಟೂರು ಕ್ಷತ್ರದಲ್ಲಿ ಸಾಕಷ್ಟು ಕೆಲಸ ಮಾಡುತ್ತಿದ್ದೇವೆ. ಕೆಲಸ ಕೂಡ ಚೆನ್ನಾಗಿ ನಡೆಯುತ್ತಿದೆಯೆನ್ನುವ ವರದಿಗಳು ನನಗೆ ಬಂದಿದೆ. ಸನ್ಮಾನ್ಯ ಸದಸ್ಯರು ಆ ಒಂದು ಕೆಲಸವನ್ನು ವೀಕ್ಷಿಸಿ ಅದರಲ್ಲಿ ಏನಾದರೂ ಲೋಪದೋಷವಿದ್ದರೆ ನನ್ನ ಗಮನಕ್ಕೆ ತರಬೇಕು. ನಾನು ಅದನ್ನು ಸರಿಪಡಿಸುತ್ತೇನೆ.

ಶ್ರೀ ಜೆ.ಸಿ. ಮಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿ, ತಿಪಟೂರಿನಲ್ಲಿ ಹೇರಳವಾಗಿ, ವ್ಯಾಪಕವಾಗಿ ಆಗುತ್ತಿರುವಂಥ ಖಾಯಿಲೆ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಾ, 3 ಸಾವಿರ ಗಿಡಗಳಿಗೆ ರೋಗ ಅಟ್ಯಾಕ್ ಆಗಿದೆಯೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಮೊದಲನೆ ಉತ್ತರದಲ್ಲಿ ತಮ್ಮ ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದೀರಿ. ಸಾವು ಅನೇಕ ಸಲ ಇದನ್ನು ರೈಸ್ ಮಾಡಿ ಕೇಳಿದ್ದೇವೆ. ಬೆಳೆ ಹಾಳಾಗಿ ಹೋಗಿದೆ. ತೆಂಗಿನಕಾಯಿ ಇರಲಿ, ಮರವೇ ಉಳಿಯುತ್ತಿಲ್ಲ. ಇದಕ್ಕೆ ಏನಾದರೂ ಮಾಡಿ ಎಂದು ಕೇಳಿದರೆ ಇದುವರೆಗೂ ಏನೂ ಆಗಲಿಲ್ಲ. ನಿಮ್ಮ ಇಲಾಖೆಯಲ್ಲಿರತಕ್ಕಂಥ ಸ್ಟ್ಯಾಫ್‌ನ್ನು ಕೂಡಾ ತೆಂಗಿನ ಬೀಜವೆನ್ನು ಸೆಲೆಕ್ಟ್ ಮಾಡಲಿಕ್ಕೆ ಡೈವರ್ಟ್ ಮಾಡಿದ್ದೀರಿ. ಅಲ್ಲಿ ಹೋಗಿ ಇನಾಕ್ಯುಲೇಷನ್ ಮಾಡುವುದು, ಪ್ರಿವೆನ್ಷನ್ ಮೇಷರ್ ತೆಗೆದುಕೊಳ್ಳಲಿಕ್ಕೆ ಹೋಗಲೇ ಇಲ್ಲ. ಇದರ ಬಗ್ಗೆ ತಿಪಟೂರು ಕೆ.ಡಿ.ಬಿ.ಯಿಂದ ರೆಕಾರ್ಡ್ ಮಾಡಿ ಕಳುಹಿಸಿದ್ದೇವೆ. ಚಿಕ್ಕನಾಯಕನಹಳ್ಳಿಯಿಂದಲೂ ಕಳುಹಿಸಿದ್ದೇವೆ. ಏನೂ ಆಕ್ಷನ್ ಆಗದೆ, ನಾವು ಮಾಡುತ್ತಿದ್ದೇವೆ, ನಾವು ಬೇಕಾದಷ್ಟು ಔಷಧಿ ಕೊಡುತ್ತೇವೆಂದು ಹೇಳುತ್ತೀರಾ. ತಮ್ಮ ಹತ್ತಿರ ಔಷಧಿ ಕೂಡಾ ಸಿಕ್ಕುತ್ತಿಲ್ಲ. ಇದರ ಬಗ್ಗೆ ತಕ್ಷಣ

ಏನಾದರೂ ಮಾಡಿದರೆ ತೆಂಗಿನ ಬೆಳೆ ಉಳಿಯುತ್ತದೆ. ಇಲ್ಲವೆಂದರೆ ಉಳಿಯುವ ಹಾಗಿಲ್ಲ. ಇದರ ಬಗ್ಗೆ ತಾವು ನೋಡಿದರೆ ಗೊತ್ತಾಗುತ್ತದೆ. ಒಂದು ಸಲ ತಾವು ನಮ್ಮ ಕಡೆ ಬರುವ ಕೃಪೆ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಸನ್ಮಾನ್ಯ ಅಧ್ಯಕ್ಷರೇ, ಚಿಕ್ಕನಾಯಕನಹಳ್ಳಿ ಮತ್ತು ತುಮಕೂರು ಭಾಗದಲ್ಲಿ ಹೆಚ್ಚು ಕೆಲಸ ಮಾಡುತ್ತಿದ್ದೇವೆ. ಔಷಧಿಯನ್ನು ಕೂಡಾ ಕೊಟ್ಟಿದ್ದೇವೆ. ವ್ಯಾಪಕವಾಗಿ ಕೂಡಾ ನಾವು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಅಸೆಂಬ್ಲಿ ಕಳೆದ ಮರುದಿನವೆ ಆ ಭಾಗಕ್ಕೆ ಹೋಗೋಣ.

ಶ್ರೀ ಜಿ.ಎಸ್. ಶಿವನಂಜಪ್ಪ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಯವೆರು ಹೋದ ತಿಂಗಳು 6ನೇ ತಾರೀಖು ತುಮಕೂರಿಗೆ ಬಂದಿದ್ದರು. ಅಲ್ಲಿ ಅಧಿಕಾರಿಗಳನ್ನು ಕರೆಯಿಸಿ ಎದುರಿಗೆ ಹೇಳಿದರು. ಅಧಿಕಾರಿಗಳು ಇದಕ್ಕೆ ಜಪ್ಪೆ ಅಂತಾ ಅನ್ನಲಿಲ್ಲ. ಇಡೀ ತುಮಕೂರು ಜಿಲ್ಲೆಯಲ್ಲಿ ಈ ರೋಗ ಹರಡಿದೆ. ಸಮರೋಪಾದಿಯಲ್ಲಿ ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಕೆಲಸ ಮಾಡದೇ ಇದ್ದವರನ್ನು ಸಸ್ಪೆಂಡ್ ಮಾಡುತ್ತೇವೆಂದು ಹೇಳಿದರು, ಏನೂ ಆಗಿಲ್ಲ. ಸಮರ ಮೊದಲೇ ಇಲ್ಲ. ದಯಮಾಡಿ ಇದರ ಬಗ್ಗೆ ಸೀರಿಯಸ್ ಆಗಿ ಗಮನ ಹರಿಸಬೇಕು. ಇಲ್ಲದಿದ್ದರೆ ರೈತರು ಹಾಳಾಗಿ ಹೋಗುತ್ತಾರೆ. ಇದಕ್ಕೆ ಏನಾದರೂ ಒಂದು ಉಪಾಯ ಕಂಡುಹಿಡಿಯಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಅಸೆಂಬ್ಲಿಯಲ್ಲಿ ನನ್ನ ಕೊಶ್ಚನ್ ಮುಗಿದ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾನ್ಯ ಸದಸ್ಯರುಗಳ ಸಮ್ಮುಖದಲ್ಲೇ ಅದರ ಬಗ್ಗೆ ಪರಿಹಾರ ಕಂಡುಹಿಡಿಯುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ ಅಧ್ಯಕ್ಷರೆ, ಈ ಕಪ್ಪು ತಲೆ ಹುಳುವಿನ ರೋಗ ಕರ್ನಾಟಕದಲ್ಲಿ ಎಷ್ಟು ಪ್ರದೇಶದಲ್ಲಿ ಹರಡಿದೆ? ಮತ್ತು ತಾವು ಸಮರೋಪಾದಿಯಲ್ಲಿ ಎಂದು ಪ್ರತಿ ಪದದಲ್ಲಿ ಹೇಳುತ್ತಿದ್ದೀರಿ. ನಿಮ್ಮ ಸರ್ಕಾರದಲ್ಲಿ ಎಷ್ಟು ಜನ ಸೈನಿಕರಿದ್ದಾರೆ? ಎಲ್ಲೆಲ್ಲಿ ಯುದ್ಧಕ್ಕೆ ಎಷ್ಟೆಷ್ಟು ಜನ ಹೋಗಿದ್ದಾರೆ?

ಅಧ್ಯಕ್ಷರು : ಸರ್ಕಾರದಲ್ಲಿ ಎಷ್ಟು ಸೈನಿಕರಿದ್ದಾರೆ, ಎಷ್ಟು ಶತ್ರುಗಳಿದ್ದಾರೆಂದು ಕೇಳಿ.

ಶ್ರೀ ವಾಟಾಳ್ ನಾಗರಾಜ್ : ಸಮರೋಪಾದಿಯಲ್ಲಿ ಎಂದು ಹೇಳುವುದಕ್ಕೆ ನಿಮ್ಮ ಹತ್ತಿರ ಎಷ್ಟು ಮದ್ದು ಗುಂಡು ಇವೆ?

ಅಧ್ಯಕ್ಷರು : ಸಮರೋಪಾದಿ ಎಂದು ಹೇಳಿಲ್ಲ. ಸಮರ ಸಿದ್ಧತೆಯಲ್ಲಿ ಎಂದು ಹೇಳಿದ್ದಾರೆ. ಸಿದ್ದತೆ ಮಾಡಿಕೊಂಡಿದ್ದಾರೆ. ಅಸೆಂಬ್ಲಿ ಆದ ತಕ್ಷಣ ಅವರು ಹೊರಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿಯವರೆಗೆ ಶತ್ರುಗಳು ಆಕ್ರಮಣ ಮಾಡುತ್ತಾರೆ. ಅವರು ಹೋಗೋ ಹೊತ್ತಿಗೆ ಊರೆಲ್ಲಾ ಬೆಂಕಿ ಬಿದ್ದಿರುತ್ತದೆ. ಬೆಂಕಿ ಬಿದ್ದಮೇಲೆ ಬಾವಿ ತೋಡಿದರು ಅನ್ನೋ ಹಾಗಾಗುತ್ತದೆ.

ಅಧ್ಯಕ್ಷರು : ನಿಮ್ಮನ್ನೂ ಕರೆಯುತ್ತಾರೆ, ನಾಳೆ ಮೀಟಿಂಗ್‌ಗೆ.

ಬಸವನಹಳ್ಳಿ ಪಂಚಾಯಿತಿಯಲ್ಲಿ ಭೂಮಿ ಪರಿವರ್ತನೆ

1254 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನೆಲಮಂಗಲ ತಾಲ್ಲೂಕು ಕಸಬಾ ಹೋಬಳಿಗೆ ಸೇರಿದ ಬಸವನಹಳ್ಳಿ ಮಂಡಲ್ ಪಂಚಾಯತಿ ವ್ಯಾಪ್ತಿಯಲ್ಲಿ 1988 ರಿಂದ 1991ರ ಜನವರಿವರೆಗೆ ಎಷ್ಟು ಎಕರೆಗೆ ಜಮೀನು ಭೂ ಪರಿವರ್ತನೆಗೆ ಮಂಜೂರಾತಿ ಮಾಡಲಾಗಿದೆ.*